

ನೋಡಲೇನೋ ಮೋಹಕ...
ಫೋಟೊ: ಅನೂಪ್ ರಾಘು ಟಿ.



ನಾಡಿಗೆ ಬಂದ ಅಭ್ಯಾಗತರು

ಮಾರಣಾಂತಿಕ ರೋಗಗಳು ವೈದ್ಯಕೀಯ ವ್ಯವಸ್ಥೆಗೂ ಸವಾಲಾಗಿವೆ. ಕರ್ನಾಟಕ ಮಾತ್ರವಲ್ಲ – ಬಿಹಾರ, ಉತ್ತರ ಪ್ರದೇಶ, ರಾಜಸ್ಥಾನ, ಕೇರಳ, ಛತ್ತೀಸ್‌ಗಡ... ಯಾವ ರಾಜ್ಯದ ಹೆಸರೆತ್ತಿದರೂ ಈ ಮೂರರಲ್ಲಿ ಒಂದರಿಂದ ಅಪಾಯವಿದ್ದೇ ಇದೆ ಎಂಬ ವರದಿಗಳಿವೆ.

ಪ್ರಾಣಿದಯಾ ಸಂಘದವರು, ಸಂರಕ್ಷಣಾ ತಜ್ಞರು, 'ಜೀವ ಸರಪಳಿಯಲ್ಲಿ ಇರುವ ಹಕ್ಕು ನಮಗಿರುವಷ್ಟು ಅವಕ್ಕೂ ಇದೆ, ಅವುಗಳ ಆವಾಸ ನಾಶದಿಂದ ಸಮಸ್ಯೆಗಳಾಗಿರುವುದು ನಿಜ, ಅದಕ್ಕೆ ಪರಿಹಾರ ಹುಡುಕುವುದು ಸಂಬಂಧಪಟ್ಟವರಿಗೆ ಆದ್ಯತೆಯಾಗಬೇಕು' ಎನ್ನುತ್ತಾರೆ. ಈ ಸಂಗತಿಯನ್ನೂ ಗಮನದಲ್ಲಿಟ್ಟುಕೊಂಡು, ವಾಸ್ತವ ಏನಿದೆ? ಸಮಸ್ಯೆ ಎಷ್ಟಿದೆ? ಎಲ್ಲಿದೆ? ಪರಿಹಾರಗಳೇನಿವೆ? ಪ್ರಸ್ತುತ, ಇವುಗಳ ಬಗ್ಗೆ ತಿಳಿದುಕೊಳ್ಳುವುದು ಅತ್ಯವಶ್ಯಕ.

## ಅಧ್ಯಾಯ 1

### ನಾಯಿ ಕಡಿತದ ನಿತ್ಯ ಅಪಾಯ

ಆಸ್ಪತ್ರೆಗಳಲ್ಲಿ ವರದಿಯಾಗುತ್ತಿರುವ ಶೇ. 96ರಷ್ಟು ಪ್ರಕರಣಗಳು ಬೀದಿನಾಯಿ ಕಡಿತದಿಂದಾಗಿವೆ ಎಂದು ಅಂಕಿ ಅಂಶಗಳಿಂದ ತಿಳಿದುಬರುತ್ತಿದೆ. ಮಂಗಗಳ ಕಚ್ಚುವಿಕೆಯಿಂದಲೂ ರೇಬಿಸ್ ಹರಡುತ್ತಿದೆ. ಪಾರಿವಾಳಗಳ ಹಾವಳಿಯಿಂದ ನ್ಯುಮೋನಿಯಾ, ಕ್ರಿಪ್ಟೊಕೋಕಲ್ ಮೆನಿಂಜೈಟಿಸ್ ಮತ್ತು ಸಿಟ್ಟಾಕೋಸಿಸ್ ಕಾಯಿಲೆಗಳು ಮನುಷ್ಯನನ್ನು ಬಾಧಿಸುತ್ತಿವೆ. ಗಾಬರಿ ಹುಟ್ಟಿಸುವಷ್ಟು ಪ್ರಮಾಣದಲ್ಲಿ ಎಳೆಯ ಮಕ್ಕಳ ಮೇಲೆ ಬೀದಿನಾಯಿ ದಾಳಿಗಳಾಗುತ್ತಿವೆ. ಮಕ್ಕಳನ್ನು ಕಳೆದುಕೊಂಡ ಪೋಷಕರ ದುಃಖ ಹೇಳತೀರದು. ಎಷ್ಟೋ ಪ್ರಕರಣಗಳಲ್ಲಿ ಖಿನ್ನತೆಗೆ ಜಾರಿರುವ ತಾಯಂದಿರು ಆತ್ಮಹತ್ಯೆಗೂ ಪ್ರಯತ್ನಿಸಿರುವುದುಂಟು. ಕೋವಿಡ್ ಅವಾಂತರಕ್ಕೂ ಮುಂಚೆ ದೇಶದಲ್ಲಿ ಬೀದಿನಾಯಿ ದಾಳಿ ಪ್ರಕರಣಗಳ ಸಂಖ್ಯೆ 72 ಲಕ್ಷದಷ್ಟಿತ್ತು. 2022ರಲ್ಲಿ 19 ಲಕ್ಷ ಬೀದಿನಾಯಿ ದಾಳಿ ಪ್ರಕರಣಗಳು ದೇಶದಲ್ಲಿ ವರದಿಯಾಗಿವೆ. 2021ರಲ್ಲಿ ದೇಶದಲ್ಲಿ ನಾಯಿ ಕಡಿತದಿಂದ ಉಂಟಾದ ರೇಬಿಸ್ ಪ್ರಕರಣಗಳನ್ನು ಕಡ್ಡಾಯವಾಗಿ ದಾಖಲಿಸಬೇಕೆಂಬ ನಿಯಮ ಜಾರಿಗೆ ಬಂತು. 2020ರಲ್ಲಿ ಕೇವಲ 733ರಷ್ಟಿದ್ದ ರೇಬಿಸ್ ಪ್ರಕರಣಗಳ ಸಂಖ್ಯೆ ಒಂದೇ ವರ್ಷದಲ್ಲಿ, ಅಂದರೆ 2021ರಲ್ಲಿ 47291ರಕ್ಕೆ ಏರಿತ್ತು.

ತಜ್ಞ ವೈದ್ಯರ ಪ್ರಕಾರ, ಒಮ್ಮೆ ರೇಬಿಸ್‌ನ ರೋಗ ಲಕ್ಷಣಗಳು ಕಾಣಿಸಿಕೊಂಡರೆ ಅದು ಸಾವಿನಲ್ಲೇ ಮುಕ್ತಾಯವಾಗುತ್ತದೆ. ಏಷ್ಯಾ ಮತ್ತು ಆಫ್ರಿಕಾಗಳಲ್ಲಿ 15 ವಯೋಮಾನದೊಳಗಿನ ಮಕ್ಕಳೇ ಹೆಚ್ಚು ಮೃತರಾಗುತ್ತಿದ್ದು, ಅದರ ಪ್ರಮಾಣ ಶೇ. 40ರಷ್ಟಿದೆ. ಭಾರತದ ಮಟ್ಟಿಗೆ ಶೇ. 96ರಷ್ಟು ಮರಣ ಮತ್ತು ಅನಾರೋಗ್ಯಗಳು ನಾಯಿ ಕಡಿತದಿಂದುಂಟಾದ ರೇಬಿಸ್‌ನಿಂದಲೇ ಎಂಬುದು ದಾಖಲಾಗಿದೆ. ಲಕ್ಷದ್ವೀಪ ಮತ್ತು ಅಂಡಮಾನ್ ನಿಕೋಬಾರ್ ದ್ವೀಪ ಸಮೂಹ